Regd. No. M... ...Founded 1917

ಸತ್ಯವಾದಿ

SATYAVADI

(ಆರಮನೆ ಸಿರಸ್ತೇದಾರ್ ಎಂ. ಖಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 19 | ಶುಕ್ರವಾರ 20—9—46 | ಬಿಡಿ ಪ್ರತಿ 3 ಪೈ

ಅನದ ಕಳ್ಳರು

ಅನ್ನವಸ್ತ್ರಗಳನ್ನು ಕದ್ದಲ್ಲಿ ಶಿಕ್ಷಿಸ ಕೊಡದು; ಅವರು ಕ್ಷಮಾಪಣಾರ್ಹರು ಎಂದು ಹಿಂದೂಧರ್ಮಶಾಸ್ತ್ರವು ಘೋಷಿಸುತ್ತದೆ ಎಂದು ಹೇಳುತ್ತಾರೆ. ಆದರೆ ಇಂದು ಭಾರತ ದೇಶವಲ್ಲಿ ಅನ್ನ ಕಳ್ಳರು ಶಿಕ್ಷಿಸಲ್ಪಡುವುದು ಮಾತ್ರವಲ್ಲ; ಅವರ ಸಂಖ್ಯೆಯು ಹೆಚ್ಚುತ್ತಿದೆ. 1946 ನೇ ಜೂನಿಗೆ ಮುಗಿದ ಮೂರು ತಿಂಗಳಲ್ಲಿ ಶಿಕ್ಷಿಸಲ್ಪಟ್ಟವರ ಸಂಖ್ಯೆ 13500. ಅವರಲ್ಲಿ 3735 ಮಂದಿ ಮದರಾಸು ನಿವಾಸಿಗಳು. ಇವರ ಸಂಖ್ಯೆಗಿಂತ ಅಸ್ಸಾಂ ಬೊಂಬಾಯಿ, ಬಂಗಾಳಗಳಲ್ಲಿ ಶಿಕ್ಷಿತರಾದವರ ಸಂಖ್ಯೆಯು ಕಡಮೆ. ಹೆಚ್ಚು ಶಿಕ್ಷೆಯನ್ನು ಕೊಟ್ಟಿರುವುದು ಮದರಾಸ್ ಪ್ರಾಂತ್ಯದಲ್ಲಿ. ಅದು ಎರಡು ವರ್ಷಗಳು. ಹಚ್ಚ ಜಲ್ಮಾನೆ ಹಾಕಿರುವುದು ಬರೋಡಾದಲ್ಲಿ. ಅದು 11635 ರೂಪಾಯಿಗಳು. ಈ ಅನ್ನ ಕಳ್ಳರು ಅನ್ನಾತುರರಲ್ಲ. ಅನ್ನವನ್ನು ಮಾರುವಂಥವರು. ಈ ಅನ್ನದ ಬರದ ಅವಕಾಶವನ್ನು ತೆಗೆದುಕೊಂಡು ಅಧಿಕ ಲಾಭಕ್ಕಾಗಿ ಅನ್ನದ ಕಳ್ಳರಾದವರು ಆದುದರಿಂದ ಇವರನ್ನು ಶಿಕ್ಷಿಸುವುದು ಹಿಂದೂಧರ್ಮಶಾಸ್ತ್ರದಂತೆ ತಪ್ಪಲ್ಲ ವೆಂಬುದು ಕೆಲವರ ಅಭಿಪ್ರಾಯ. ಬಿಳಿಗಳ ಭಾಗ್ಯ ದೇಶವಾದ ಅನ್ನಪೂರ್ಣ ಭವಾನಿ ಮನೆಯಲ್ಲಿ ಇಂಥಾ ವಿಪರೀತ ಪರಿಸ್ಥಿತಿಗಳು ಏರ್ಪಟ್ಟಲ್ಲಿ ದೇವತೆಗಳೂ ಪಿತೃದೇವತೆಗಳೂ ವಿಚಾರಗ್ರಸ್ತರಾಗಿರುತ್ತಾರೆಂದು ನಿಸ್ಸಂಶಯವಾದದ್ದು. (ತ್ರಿ)

ಮುಸುಕಿನ ಜೋಳದ ಹಿಟ್ಟು

ಬೆಂಗಳೂರು ಸೆ 18 — ಮೈಸೂರು ಬೆಂಗಳೂರು ನಗರಗಳಲ್ಲಿ ಬಿ. ರೇಷ್ಠ ಕಾರ್ಡು ಹೋಲ್ಡರುಗಳಿಗೆ ಮುಸಕಿನ ಜೋಳದ ಹಿಟ್ಟು ರೂಪಾಯಿಗೆ 9 ಪೌಂಡು ವೀರೆ ಸರಬರಾಜು ಮಾಡಲು ಸರಕಾರದವರು ಏರ್ಪಡಿಸಿದ್ದಾರೆಂದು ಪ್ರೆಸ್ ನೋಟು ತಿಳಿಸುತ್ತದೆ.

ವೃತ್ತಪತ್ರ ದರ ನಿಯಂತ್ರಣ ಹಿಂತೆಗೆದುಕೊಳ್ಳಲಾಯಿತು

ಹಿಂದೂಸ್ಥಾನ ಸರಕಾರದವರು ವೃತ್ತಪತ್ರ ದರದ ಮೇಲೆ ಹಾಕಿದ ನಿಯಂತ್ರಣವನ್ನು ಹಿಂತೆಗೆದುಗೊಳ್ಳಲಾಗಿರುವುದೆಂದು ಪ್ರಕಟಣೆ ಹೊಂಡಿಸಿದ್ದಾರೆ. ಆದರೆ ದಿನದ ಪತ್ರಿಕೆಯ ದರವು 2 ಆಣೆಗಿಂತ ಹೆಚ್ಚಿಗೆ ಇರಕೂಡದೆಂದು ಹೇಳಲಾಗಿದೆ.

ಭಂಗಾರದ ಹರಿಮಣ

ಬೊಂಬಾಯಿ ಸೆ 17 — ಪಂ॥ ನೆಹರೂರವರಿಗೆ ಅವರ 58 ನೇ ಜನ್ಮೋತ್ಸವ ದಿವಸ [ನವೆಂಬರ್ 2ನೇ ವಾರದ] ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನವರು 58 ತೊಲ ಬಂಗಾರದ ಹರಿವಾಣವನ್ನು ಅರ್ಪಿಸಲು ಏರ್ಪಾಡು ನಡೆಯುತ್ತಿದೆ.

ಮಹಾ ಸಭೆ ಪ್ರತಿನಿಧ್ಯ

ಬೆಂಗಳೂರು ಸೆ 16 — ಅಖಿಲ ಭಾರತ ಹಿಂದೂ ಮಹಾ ಸಭೆಯ ಪ್ರತಿನಿಧ್ಯವು ಹೈದರಾಬಾದು ಮುಖ್ಯ ಮಂತ್ರಿ ಸರ ವಿಜಾರ್ಣವರನ್ನು ಭೇಟಿ ಮಾಡಿ ಹೈದರಾಬಾದಿನಲ್ಲಿನ ರಾಜ್ಯಾಂಗ ಸಂಸ್ಕರಣ ಕುರಿತು ಪ್ರಸ್ತಾಪಿಸುವದೆಂದು ತಿಳಿಯ ಬಂದಿದೆ.

ಲಕ್ಷಾಧಿಕಾರಿ ದಸ್ತಗಿರಿ

ಜಬ್ಬಲ್ಪುರ ಸೆ 17 — ಭಾರತ ಸರಕಾರಕ್ಕೆ 1 ಲಕ್ಷ ರೂಪಾಯಿ ಮೋಸ ಮಾಡಿರುವ ಅಪಾದನೆ ಮೇಲೆ 7 ಮಂದಿ (ಆದರಲ್ಲಿ ಒಬ್ಬರು ಕಲ್ಕತ್ತಾ ಲಕ್ಷಾಧಿಕಾರಿ) ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ವಿ. ವಿ. ಪ್ರಚಾರೋಪನ್ಯಾಸ

ಮೈಸೂರು ಸೆ 17—ಯೋಗಶಾಲಾ ಡೈರೆಕ್ಟರ್ ಪ್ರೊ॥ ಕೃಷ್ಣಮಾಚಾರ್ಯರು 'ಯೋಗಾಂಗ ಸಾಧನೆ' ಎಂಬ ವಿಷಯವನ್ನು ಕುರಿತು— ತಾ॥ 20 ರಲ್ಲಿ ದಾವಣಗೆರೆ ಶಿವಯೋಗಮಂದಿರದ ಹಾಲಿನಲ್ಲೂ, ತಾ॥ 22 ರಲ್ಲಿ ತುಮಕೂರು ಕಾಲೇಜಿನ ಅಸೋಸಿಯೇಷ್ಠ ಹಾಲಿನಲ್ಲೂ, ತಾ॥ 24 ರಲ್ಲಿ ಹಾಸನದ ಕಾಲೇಜು ಹಾಲಿನಲ್ಲೂ, ಭಾಷಣ ಮಾಡುವರು.

ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆ ಕೂಡಲೇ ಆಗಬೇಕು

ಸಂಬಳ ಹೆಚ್ಚಿಸಿ !

ಮೈಸೂರು ಸೆ 16— ವಿಶ್ವವಿದ್ಯಾನಿಲಯದ ಕಾಲೇಜು ಲೆಕ್ಚರುಗಳು ತಮ್ಮ ಸಂಬಳ ಹೆಚ್ಚಿಸಬೇಕೆಂದು ವಿದ್ಯಾಮಂತ್ರಿಗಳಲ್ಲಿ ವಿಜ್ಞಾಪನಾಪತ್ರವನ್ನು ಅರ್ಪಿಸಿದಾರೆ.

ಪಾನ ನಿರೋಧ ಯೋಜನೆ

ಮದರಾಸು ಸೆ 16 — ಅಕ್ಟೋಬರಿನಿಂದ 8 ಡಿಸ್ಟ್ರಿಕ್ಟುಗಳಲ್ಲಿ ಜಾರಿಗೆ ಬರುವ ಪಾನ ನಿರೋಧ ಯೋಜನೆಯಲ್ಲಿ 4126 ಮಂದಿ ಕೆಲಸ ಮಾಡುವರು.

ತಾತ್ಕಾಲಿಕ ಸರಕಾರದಲ್ಲಿ ಲೀಗು

ನವದೆಹಲಿ ಸೆ 17 — ತಾತ್ಕಾಲಿಕ ಸರಕಾರನಲ್ಲಿ ಲೀಗು ಭಾಗವಹಿಸುವದೆಂದು ಅನೇಕರು ನಂಬಿದ್ದಾರೆ.

ಗಾಂಧೀಜಿ

ಕಾಶಿ ಸೆ 17— ಗಾಂಧೀಜಿಯವರು ಪಂ॥ ಮಾಳವ್ಯರನ್ನು ನೋಡಲು ಇಲ್ಲಿಗೆ ಬರುವರೆಂದು ಹೇಳಲಾಗಿದೆ.

ಆಗಾಖಾನ್

ಲಂಡನ್ ಸೆ 17 — ಆಗಾಖಾನರು ಸ್ವಿಟ್ಜರ್ಲೆಂಡಿನಲ್ಲಿಯ ಗಾಸ್ಟಾಡಿನಲ್ಲಿನ ಒಂದು ಹೋಟಿಲಿನಲ್ಲಿ ತಂಪಿದ್ದ ಕೊಠಡಿಯನ್ನು ಬಿಡಲಿಚ್ಛಿಸದೆ ಆ ಹೋಟಲನ್ನೇ ಕೊಂಡುಕೊಂಡರೆಂದು ವರ್ತಮಾನ ಬಂದಿದೆ.

ರಾಷ್ಟ್ರೀಯ ಬಿಕ್ಕಟ್ಟಿನ ಪರಿಹಾರ

ನವದೆಹಲಿ ಸೆ 10— ಚತ್ತಾರಿ ನವಾಬರು ಈ ದಿನ ವೈಸರಾಯರ ಭೇಟಿ ನಡೆಸಿದರು- ರಾಷ್ಟ್ರೀಯ ಬಿಕ್ಕಟ್ಟನ್ನು ಪರಿಹರಿಸುವ ಕುರಿತು ತಾನು ವೈಸರಾಯಿಗಳೊಡನೆ ಮಾತುಕತೆ ನಡೆಸುವದಂದೂ ಆ ವಿಷಯದಲ್ಲಿ ಬೇಗನೆ ಒಂದು ಒಪ್ಪಂದ ಉಂಟಾಗುವುದೆಂದೂ ತಾನು ನಿರೀಕ್ಷಿಸುವುದಾಗಿ ಅವರು ಪತ್ರಿಕಾ ಪ್ರತಿನಿಧಿಗಳೊಡನೆ ಹೇಳಿದರು.

ಗಿಣಿ ಮುಷ್ಕರ

ಕಾನ್ಪುರ ಸೆ 17 — ಇಲ್ಲಿಯ 6 ಗಿರಣಿಗಳ ಸುಮಾರು 25 ಸಾವಿರ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ.

ರಾಜೇಂದ್ರರ ಆಕಾಶವಾಣಿ ಭಾಷಣ

ನವದೆಹಲಿ ಸೆ 19 — ತಾ॥ 23 ನೇ ಸೋಮವಾರ ತಾತ್ಕಾಲಿಕ ಸರಕಾರದ ಆಹಾರ ಸದಸ್ಯ ಡಾ॥ ಬಾಬು ರಾಜೇಂದ್ರ ಪ್ರಸಾದ್ ಬೆಳಗಿನ ಜಾವ 4—30 ಗಂಟೆಗೆ ಭಾರತದ ಆಹಾರ ಪರಿಸ್ಥಿತಿ ಕುರಿತು ಆಕಾಶವಾಣಿಯಲ್ಲಿ ಭಾಷಣ ಮಾಡುವರು.

ಜವಾಬ್ದಾರಿ ಸರ್ಕಾರವೇ ಸಂಜೀವನ

ನವದೆಹಲಿ ಸೆ 18 — ಸಂಸ್ಥಾನದ ಪ್ರಜೆಗಳ ಸಮ್ಮೇಳನದ ಸ್ಥಾಯಿಸಮಿತಿ ಈ ದಿನ ಸಂ॥ ನೆಹರು ಅಧ್ಯಕ್ಷತೆಯಲ್ಲಿ ಸೇರಿತ್ತು. ಘಟನಾ ಸಮಿತಿಗೆ ಸಂಸ್ಥಾನದಿಂದ ನಡೆಯುವ ಚುನಾವಣೆಯನ್ನು ಪರಿಶೀಲಿಸಲಾಯಿತು.

ಸಂಸ್ಥಾನಗಳಲ್ಲಿ ಜವಾಬ್ದಾರಿ ಆಡಳಿತ ಕೂಡಲೇ ಆರಂಭವಾಗಬೇಕು. ಇಲ್ಲದಿದ್ದರೆ ಸಂಸ್ಥಾನ ಪ್ರಜೆಗಳಿಗೆ ಅಸಂತೃಪ್ತಿಯಾಗುವುದು ಅನಪೇಕ್ಷಿತ ಭವಿಷ್ಯಗಳು ನಡೆಯುವವು ಕದನ ಆರಂಭವಾಗುವದೆಂಬ ವರದಾಯಿತು.

ಚೋರಿ ಇರಿತಗಳು

ಅಹಮದಾಬಾದ್ ಮತ್ತು ಡಾಕ್ಕಾ ಗಳಲ್ಲಿ ಚೂರಿ ಇರಿತಗಳು ನಿಂತಿಲ್ಲ.

ಹಿಂದೀ ಸರ್ಕಾರಕ್ಕೆ ಅಭಿನಂದನೆ

ಚಿಕ್ಕಮಗಳೂರು ಸೆ 20 — ಮೊನ್ನೆ ಸಂಜೆ ಸೇರಿದ್ದ ಕಡೂರು ಜಿಲ್ಲಾ ಸಭೆಯು ಸರ್ವಾದೇಶದಲ್ಲಿ ಹಿಂದೀ ಸರಕಾರ ಸ್ಥಾಪಿಸಿದ್ದಕ್ಕಾಗಿ ಪ್ರಧಾನಿ ನೆಹರೂರವರನ್ನು ಅಭಿನಂದಿಸುವ ನಿರ್ಣಯವಾಯಿತು.

ಸಕ್ಕರೆ ರೇಷ್ಠ ಇಳಿತಾಯವಾಗುವುದಂತೆ

ಬೆಂಗಳೂರು ಸೆ 19 — ' ಐದು ಸಾವಿರ ಟನ್ನು ಸಕ್ಕರೆ ತೆಯಾರಿಕೆ ಈ ವರ್ಷ ಕಡಿಮೆ ಬೀಳ್ಳಲಿದೆ ಸಂಸ್ಥಾನದಲ್ಲಿ ಸಕ್ಕರೆ ರೇಷ್ಠ ಇಳಿತಾಯವಾಗುವುದು' ಎಂಬುದಾಗಿ ಆಹಾರ ಶಾಖಾಧಿಕಾರಿ ಶ್ರೀ ಗುರುದತ್ ಸಕ್ಕರೆ ಪರಿಸ್ಥಿತಿ ನಿರ್ದೇಶನೆಯಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಗಲಭೆ ಪಸ್ತಗಿರಿಗಳೆಷ್ಟು

ಕಲ್ಕತ್ತಾ ಸೆ 19 — 3600 ಮಂದಿ ಕಲ್ಕತ್ತಾ ದೊಂಬಿ ಸಂಬಂಧದಲ್ಲಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಭಾರಿ ಕೊಳ್ಳೆ

ಕರಾಚಿ ಸೆ 18 — ಸಶಸ್ತ್ರ ಕಳ್ಳರ ಗುಂಪೊಂದು ಸಹದಾನಿ ಹಳ್ಳಿಯ ಮೇಲೆ ಧಾಳಿ ನಡೆಸಿ 31 ಸಾವಿರ ರೂ ದೋಚಿಕೊಂಡು ಪರಾರಿಯಾಗಿರುವರು

ಆಯುಧಗಳ ಶೋಧನೆ

ಶ್ರೀನಗರ ಸೆ 18 — ಪೋಲಿಸರು ಅಕಸ್ಮಾತ್ ಜಲನಹ ನಗರ್ ಎಂಬ ಮುಸ್ಲಿಂ ಮನೆ ಮೇಲೆ ಧಾಳಿ ನಡೆಸಿದಾಗ 1100 ಬಾಂಕು ಚಾಕುಗಳು ಬಂದೂಕ ಸಿಕ್ಕಿವೆ ಮತ್ತೊಂದು ಕಡೆಯಲ್ಲಿ 267 ಚೂರಿಯ ಕಂತೆ ದೊರೆತಿದೆ ತನಿಖೆ ಕ್ರಮ ನಡೆಯುತ್ತಿದೆ. ದಸ್ತಗಿರಿಗಳಾಗಿಲ್ಲ.

ಗಲಭೆ ಸಂಬಂಧದಲ್ಲಿ ಬೊಂಬಾಯಿಯಲ್ಲಿ 3 ಸಾವಿರಕ್ಕೆ ಮೇಲ್ಪಟ್ಟು ದಸ್ತಗಿರಿಗಳಾಗಿವೆ.

ಆಯುರ್ವೇದ ವಿದ್ಯಾರ್ಥಿಗಳ ಕುಂದು ಕೊರತೆಗಳು

ಮೈಸೂರು ಸೆ 19 — ' ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳಿಗೆ ಉತ್ಸಾಹ ಇಳಿಮುಖವಾಗಿದೆ. ಅಲ್ಲಿನ ಅಧ್ಯಾಪಕ ವರ್ಗ ಮತ್ತು ಆಡಳಿತ ನೀತಿ ತೃಪ್ತಿಕರವಾಗಿಲ್ಲ. ಕೇವಲ 33 ಮಂದಿ ವಿದ್ಯಾರ್ಥಿಗಳು ಆಯುರ್ವೇದ ವ್ಯಾಸಂಗ ಮಾಡುತ್ತಿದ್ದಾರೆ, ಆಯುರ್ವೇದ ಕಾಲೇಜನ್ನೂ ನಿಶ್ಚ ವಿದ್ಯಾನಿಲಕ್ಕೆ ಸೇರಿಸಿಕೊಳ್ಳಬೇಕು ಹಾಗೆ ಮಾಡದಿದ್ದರೆ ಇಲ್ಲಿಯ ಆಯುರ್ವೇದ ವಿದ್ಯೆಗೆ ಸಂಸ್ಥಾನದಾಚೆ ಬೆಲೆಯಿಲ್ಲ' ಎಂಬುದಾಗಿ ಈ ದಿವಸ ಬೆಳಿಗ್ಗೆ ಆಹ್ವಾನಿಸಲ್ಪಟ್ಟಿದ್ದ ಪತ್ರಿಕಾ ಸಮ್ಮೇಳನದಲ್ಲಿ ಶ್ರೀ ಟಿ. ಮರಿಯಪ್ಪನವರು ವಿವರಿಸಿದರು.

ನೆಯ್ಗೆ ಕೂಲಿಯವರ ತೊಂದರೆಗಳನ್ನು ವಿವರಿಸುತ್ತಾ ಶ್ರೀ ಟಿ. ಮರಿಯಪ್ಪನವರು ಮೈಸೂರಿನಲ್ಲಿ 420 ಮಂದಿ ಕೂಲಿಯವರಿರುವರೆಂದೂ ಅವರೆಲ್ಲರೂ ಮಾಲೀಕರ ಸರ್ವಾಧಿಕಾರಕ್ಕೆ ತುತ್ತಾಗಿರುವರೆಂದೂ ಅವರ ಕಷ್ಟಗಳ ನಿವಾರಣೆಗಾಗಿ ಮೊನ್ನೆ ಸಭೆಯನ್ನು ಸೇರಿಸಿ ಸಂಘವನ್ನು ಸ್ಥಾಪಿಸಿ ಶ್ರೀ ಬಿ. ನಾರಾಯಣ ಸ್ವಾಮಿಯವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತೆಂದು ತಿಳಿಸಿ ಸಧ್ಯದಲ್ಲಿಯೇ ಮಾಲೀಕ ಸಭೆಯನ್ನು ಕರೆದು ಮಜೂರಿ ಬೇಡಿಕೆಗಳನ್ನು ಮುಂದಿಡುವುದಾಗಿ ತಿಳಿಸಿದರು.

ಮಂಡ್ಯ ಮತ್ತು ಮೈಸೂರು ನಗರದ ಎಲ್ಲಾ ಮಜೂರರ ಸಮ್ಮೇಳನವನ್ನು ಮುಂದಿನ ಮಾಹೆ ತಾ|| 6 ರಲ್ಲಿ ಕರೆದು ಮೈಸೂರು ಮತ್ತು ಮಂಡ್ಯ ಮಜೂರರ ಸಬ್ ಫೆಡರೇಷನ್ ಸ್ಥಾಪಿಸುವುದಾಗಿ ಹೇಳಿದರು.

ಚಳಿ ಜ್ವರಕ್ಕೆ

ಉಚಿತವಾಗಿ ಔಷಧವನ್ನು ಕೊಡಲಾಗುವುದು.

ಆ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

ಅಕ್ಕ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ವೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ, ಮೈಸೂರು

ಹಿಂದೀಯರ ಬಗ್ಗೆ ಅಭಿಮಾನ

* ಎಲ್ಲ ಪಾಶ್ಚಾತ್ಯ ರಾಷ್ಟ್ರಗಳಿಗಿಂತಲೂ ಅಮೇರಿಕೆಯು ಹಿಂದೀಯರನ್ನು ಚೆನ್ನಾಗಿ ನಡೆಸಿಕೊಳ್ಳುತ್ತಿದೆಯೆಂದು ಪ್ರಸಿದ್ಧ ಹಿಂದೀ ಗ್ರಂಥಕರ್ತರಾದ ಡಾ || ಕೆ. ಎಲ್. ಶ್ರೀಧರಾಣಿಯವರು ಲಂಡನ್ನಿನಲ್ಲಿ ಒಂದು ಸ್ವಾಗತ ಸಮಾರಂಭದಲ್ಲಿ ತಿಳಿಸಿದರು.

Talk-a-Tone

Premier Film Mag. of S. India

Local Agent— D. Mahaadev

c/o Opera Talkies,, Mysore

ರಿಜಿಸ್ಟರ್ಡ್

100 ವರ್ಷಗಳ ಖ್ಯಾತಿಯು ಒಂದು ಹಿಮಾಲಯಾ ಮೂಲಿಕೆಯು ಗೂಡಲು ಮತ್ತು ಮೂಲವ್ಯಾಧಿಯನ್ನು 10–10–46 (ಪೂರ್ಣಿಮಾ ದಿವಸ) ಒಂದೇ ಸಾರಿ ಸೇವಿಸುವುದರಿಂದ ಪೂರ್ಣ ಗುಣಪಡಿಸುವುದು.

ಸೂಚನೆ — ಬೃಂದಾವನದ ಗುರುಕುಲ ವೈದೀಕ ವಿಶ್ವವಿದ್ಯಾನಿಲಯದ ಗೌತಮ ಶಾಸ್ತ್ರಿಗಳು ಈ ಮೂಲಿಕೆಯಿಂದ 11 ರಲ್ಲಿ 9 ಮಂದಿ ರೋಗಿಗಳು ಗುಣ ಹೊಂದಿರುವರು ಎಂದು ಬರೆದಿದ್ದಾರೆ. ಇಂಗ್ಲೀಷಿನಲ್ಲಿ ಬರೆಯಿರಿ,

Sri S.dh Baba Sewa Asram
P. O. Chitrakot (U. P.)

At Ranjit

3rd Houseful Week

Anmol Ghadi

ನೂರ್‌ಜಹಾನ್ — ಸುರೇಂದ್ರ

ಜಹಂಗೀರ್ ರಾಜಾ — ಸುರಿಯ

ಪಾತ್ರವಹಿಸಿರುವ

ಅನ್ಮೋಲ್ ಘಡಿ

(ಅಮೂಲ್ಯ ಗಡಿಯಾರ)

Edited, Printed and Published by M. S. Krishna Rao at the Satyavadi Press, Chamaraja Agrahar, Mysore,

ವಿಜಯದಶಮಿ ಮೆರವಣಿಗೆ ಈ ಸಾರಿ ಇಲ್ಲ

ಜಂಬೂಸವಾರಿ ಇಲ್ಲ — ಆಹಾರಾಭಾವದ ಪ್ರಯುಕ್ತ ಈ ಸಾರಿ ಜಂಬೂಸವಾರಿ ಮೆರವಣಿಗೆ ನಿಲ್ಲಿಸಲಾಗಿದೆಯೆಂದು ಸರ್ಕಾರಿ ಪ್ರಕಟನೆಯಾಗಿದೆ.

At Opera == From 20–9–46

CHOW - CHOW

* ಎನ್. ಎಸ್. ಕೃಷ್ಣನ್ * ಟಿ. ಎ. ಮಧುರಂ * ಕಾಳಿಯನ್‌ರತ್ನಂ

* ದೊರೆರಾಜ್ * ರಾಜಕಾಂತಂ ಪಾತ್ರವಹಿಸಿರುವ

ಚೌ ಚೌ

ಮಾರ್ಕೆಟ್ ಪ್ರದರ್ಶನ

ರಾಜಧಾನಿಯ ದೇವರಾಜ ಮಾರ್ಕೆಟ್ಟಿನಲ್ಲಿ ಬರುವ ನವರಾತ್ರಿ ಉತ್ಸವ ಸಂದರ್ಭದಲ್ಲಿ 1946 ನೇ ಅಕ್ಟೋಬರ್ ಮಾಹೆ 2 ಮತ್ತು 3 ನೇ ಬುಧವಾರ ಮತ್ತು ಗುರುವಾರ **ಮಾರ್ಕೆಟ್ ಪ್ರದರ್ಶನ ಮತ್ತು ಫಲಪುಷ್ಪಗಳ ಪ್ರದರ್ಶನವನ್ನು** ನಡೆಸಲು ಏರ್ಪಾಡಾಗಿದೆ.

ಮಾರ್ಕೆಟ್ ಸ್ಟಾಲ್ ಹೋಲ್ಡರುಗಳಲ್ಲದೆ ಇತರ ವ್ಯಾಪಾರಸ್ಥರುಗಳೂ ಮತ್ತು ಖಾಸಗೀ ಮಹನೀಯರುಗಳೂ ಸ್ಪರ್ಧಿಸಲು ಅವಕಾಶವಿರುತ್ತದೆ. ಉತ್ತಮ ಪ್ರದರ್ಶನಕಾರರಿಗೆ ಬೆಳ್ಳಿ ಬಟ್ಟಲು ಮತ್ತು ಮೆಡಲುಗಳನ್ನು ಬಹುಮಾನವಾಗಿ ಕೊಡಲಾಗುವುದು.

ಪ್ರದರ್ಶನ —

2 ನೇ ತಾ || ಬೆಳಿಗ್ಗೆ 10 ರಿಂದ

3 ನೇ ತಾ || ಬೆಳಿಗ್ಗೆ 8–30 ರಿಂದ

ಪ್ರವೇಶಧನ —

2 ನೇ ತಾ || **0–2–0**

3 ನೇ ತಾ || **0–1–0**

(ಸಹಿ) ಎ. ಕೃಷ್ಣಮೂರ್ತಿರಾವ್

ಕಾರ್ಯದರ್ಶಿ, ಮಾರ್ಕೆಟ್ ಪ್ರದರ್ಶನ ಸಮಿತಿ